**ಓ ಎಸ್ ನಂಃ 976-14**
**ಪಿ ಡಬ್ಲ್ಯೂ ಃ 1**

**ದಿಃ 02-04-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ**

ದಾವಾ ಐಟಂ ನಂ 1 ರಿಂದ 3ರ ಮಾಲೀಕರು ನಾವು ಎಂದು ಗೋಷಿಸಬೇಕು ಎಂದು ಹೇಳಿ ವಾದಿ ಅವರು ಈ ದಾವೆಯನ್ನು ದಾಖಲಿಸಿದ್ದಾರೆ ಅಂದರೆ ಸರಿ. 1 ರಿಂದ 3 ಐಟಂ ಸ್ವತ್ತುಗಳು ಸುಮಾರು 6 ಎಕರೆ ವಿಸ್ತೀರ್ಣ ಇದೆ ಅಂದರೆ ಸರಿ. ಮೂರು ಐಟಂ ಸ್ವತ್ತುಗಳು ದೇವಮಾಚೋಹಳ್ಳಿ ಗ್ರಾಮಕ್ಕೆ ಸೇರಿದೆ ಅಂದರೆ ಸರಿ. ದೇವಮಾಚೋಹಳ್ಳಿ ಗ್ರಾಮದಲ್ಲಿ ಇರುವ ಜಮೀನು 1ಎಕರೆಗೆ 50 ಲಕ್ಷ ಬೆಲೆ ಬಾಳುತ್ತದೆ ಅಂದರೆ ಸರಿ. ಸಾಕ್ಷಿಗೆ ತೋರಿಸಿದ ವ್ಯಾಲ್ಯೂಯೇಷನ್ ಸ್ಲಿಪ್ ಅನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಆ ಕಾರಣಕ್ಕಾಗಿ ನಾವು ನಾಯಾಲಯಕ್ಕೆ ಸರಿಯಾಗಿ ಶುಲ್ಕವನ್ನು ಕಟ್ಟಿಲ್ಲ ಅಂದರೆ ಸರಿ.

ದಿಃ24.01.54 ರಲ್ಲಿ ವಾದಿ ತಂದೆ ಹನುಮನರಸಯ್ಯ ರವರು ಅವರ ಸಹೋದರರಾದ ಹಳ್ಳಪ್ಪ, ಚಿಕ್ಕಣ್ಣ ನರಸಹನುಮಯ್ಯ ರವರಿಗೆ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿದ್ದರು ಅಂದರೆ ಸರಿಯಲ್ಲ. ಸದರಿ ಪತ್ರವನ್ನು ನಾನು ಓದಿದ್ದೇನೆ. ಸದರಿ ಪತ್ರವನ್ನು ಓದಿದ ನಂತರ ನನಗೆ ಹನುಮನರಸಯ್ಯ ರವರು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದ ವಿಚಾರ ಗೊತ್ತಾಯಿತು. ಸದರಿ ಪತ್ರವನ್ನು ಪ್ರಶ್ನಿಸಿ ನಾನು ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಿದ್ದೇನೆ. ಈ ದಾವಾ ಹಾಕುವ 2 ವರ್ಷಗಳ ಹಿಂದೆ ನನಗೆ ಸದರಿ ಪತ್ರದ ಬಗ್ಗೆ ಮಾಹಿತಿ ಇದೆ. ವಾದಿ ತಂದೆ ಹನುಮನರಸಯ್ಯ 72-73 ಇಸವಿಯಲ್ಲಿ ತೀರಿಕೊಂಡಿದ್ದರು ಅಂದರೆ ಸರಿ. ಹನುಮನರಸಯ್ಯರವರು ಬದುಕಿದ್ದಾಗ ಹಕ್ಕು ನಿವೃತ್ತಿ ಪತ್ರ ಪ್ರಶ್ನಿಸಿ ಅವರ ಸಹೋದರರ ವಿರುದ್ದ ದಾವೆಯನ್ನು ದಾಖಲಿಸಿದ್ದರು.

ಸದರಿ ದಾವಾ ಸಂಖ್ಯೆ 12/2010-11 ಆಗಿರುತ್ತದೆ. ಆಗ ನನ್ನ ತಾತ ಬದುಕಿರಲಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಹನುಮನರಸಯ್ಯ ರವರು ಬದುಕಿದ್ದಾಗ ಅವರು ಅವರ ಸಹೋದರರ ವಿರುದ್ದ ಯಾವುದೇ ದಾವೆಯನ್ನು ದಾಖಲಿಸಿಲ್ಲ. ವಾದಿ ತಂದೆ ಹನುಮನರಸಯ್ಯರವರು 64 ಇಸವಿಯಲ್ಲಿ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟ ನಂತರ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ ಹಾಗೂ ಅವರ ಅಣ್ಣ ತಮ್ಮಂದಿರು ಸ್ವಾಧೀನವನ್ನು ಮುಂದುವರೆಸಿಕೊಂಡು ಬಂದಿದ್ದರು ಅಂದರೆ ಸರಿಯಲ್ಲ.

ವಾದಿ ತಂದೆ ಹನುಮನರಸಯ್ಯರವರ ಅಣ್ಣನ ಹೆಸರು ನರಸಹನುಮಯ್ಯ. ಅವರಿಗೆ ಮಕ್ಕಳು

ಮತ್ತು ವಾರಸುದಾರರು ಇಲ್ಲ ಅಂದರೆ ಸರಿ. ನರಸಹನುಮಯ್ಯ ರವರು ತೀರಿಕೊಂಡ ನಂತರ ಅವರ ಇಬ್ಬರು ಸಹೋದರರಾದ ಹಳ್ಳಪ್ಪ ಮತ್ತು ಚಿಕ್ಕಣ್ಣರವರು ದಾವಾ ಸ್ವತ್ತನ್ನು ಅನುಬವಿಸಿಕೊಂಡು ಬರುತ್ತಿದ್ದಾದರೆ ಅಂದರೆ ಸರಿಯಲ್ಲ. 77-78 ನೇ ಇಸವಿಯಲ್ಲಿ ಹಳ್ಳಪ್ಪ ಮತ್ತು ಚಿಕ್ಕಣ್ಣರವರು ಮೌಖಿಕವಾಗಿ ಆಸ್ತಿಗಳನ್ನು ವಿಬಾಗ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ಚಿಕ್ಕಣ್ಣ ರವರ ಹೆಸರಿಗೆ ದಾವಾ ಸ್ವತ್ತಿನ ಕೆಲವು ಕಂದಾಯ ದಾಖಲೆಗಳು ಆಗಿದೆ ಅಂದರೆ ಸರಿ. ಚಿಕ್ಕಣ್ಣ ರವರು ತೀರಿಕೊಂಡಿದ್ದಾಗ ಅವರ ವಾರುಸದಾರರು ಹನುಮಂತಯ್ಯ ಮತ್ತು ಲಕ್ಷ್ಮಿ ನರಸಿಂಹಯ್ಯ ರವರು ಇದ್ದಾರೆ. ಅವರಿಬ್ಬರನ್ನು ಈ ದಾವೆಯಲ್ಲಿ ಪಾಟಿ ಮಾಡಿಲ್ಲ. ಹನುಮಂತಯ್ಯ ಮತ್ತು ಲಕ್ಷ್ಮಿ ನರಸಿಂಹಯ್ಯ ರವರು ಅವರ ಹೆಸರಿಗೆ ಖಾತೆ ಪಹಣಿಯನ್ನು ಮಾಡಿಲ್ಲ.

ಚಿಕ್ಕಣ್ಣರವರು ಬದುಕಿದ್ದಾಗ ದಾವಾ ಐಟಂ ನಂ 8 ರ ಆಸ್ತಿಯಲ್ಲಿ ಅವರೇ ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿ. ಅವರು ತೀರಿಕೊಂಡ ನಂತರ ಅವರ ಮಕ್ಕಳು ಸದರಿ ಆಸ್ತಿಯನ್ನು ಸ್ವಾಧೀನ ಮಾಡಿಕೊಂಡು ಅನುಬವಿಸುತ್ತಿದ್ದಾರೆ ಅಂದರೆ ಸರಿ. ಆ ಕಾರಣಕ್ಕಾಗಿ ನಾನು ಅವರನ್ನು ಪಾಟಿ ಮಾಡಿಲ್ಲ ಅಂದರೆ ಸರಿ. ದಾವಾ ಐಟಂ ನಂ 8 ರಲ್ಲಿ ಸಹ ನನಗೆ ಪರಿಹಾರ ಬೇಕಾಗಿದೆ. 1 ಮತ್ತು 2 ನೇ ಪ್ರತಿವಾದಿಗಳ ತಂದೆ ಹಳ್ಳಪ್ಪರವರ ಹೆಸರಲ್ಲಿರುವ ಆಸ್ತಿಗಳು ನನ್ನ ತಾತ ಹನುಮನರಸಯ್ಯರವರ ಹೆಸರು ಬರುತ್ತಿದೆ ಅಂದರೆ ಸರಿ. ಹನುಮನರಸಯ್ಯರವರ ಹೆಸರಲ್ಲಿ ಖಾತೆ ಪಹಣಿ

ಉಳಿದುಕೊಂಡಿದ್ದ ಕಾರಣ ಅದನ್ನು ದುರುಪಯೋಗಪಡಿಸಿ ನಾವು ಈ ದಾವೆಯನ್ನು ಹಾಕಿದ್ದೇವೆ ಅಂದರೆ ಸರಿಯಲ್ಲ. ಹನುಮನರಸಯ್ಯರವರ ಹೆಸರಲ್ಲಿ ಖಾತೆ ಪಹಣಿ ಇರುವ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗಳು ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿ ಪ್ರಕರಣವನ್ನು ದಾಖಲಿಸಿದ್ದಾರೆ ಅಂದರೆ ಸರಿ. ಎಸಿ ಅವರು ಅಲ್ಲಿ ಸ್ಥಳ ತನಿಖೆ ಮಾಡಿ 1 ಮತ್ತು 2 ನೇ ಪ್ರತಿವಾದಿ ಹಸೆರಿಗೆ ಖಾತೆ ಪಹಣಿಯನ್ನು ಬದಲಾಯಿಸಿದ್ದಾರೆ ಅಂದರೆ ಸರಿ.

ದಾವಾ ಐಟಂ ನಂ 1 ರಲ್ಲಿರುವ 7 ಗುಂಟೆ ಜಮೀನಿನ ಪೈಕಿ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ತಲಾ ಅರ್ದ ಬಾಗ ಇದೆ ಅಂದರೆ ಸರಿ. ಉಳಿಕೆ ಅರ್ದ ಬಾಗ 3 ನೇ ಪ್ರತಿವಾದಿ ಹೆಸರಲ್ಲಿದೆ ಅಂರೇ ಸರಿ. ದಾವಾ ಐಟಂ ನಂ 2 ಕ್ಕೆ ಸಂಬಂದಿಸಿದಂತೆ 1 ಮತ್ತು 2 ಪ್ರತಿವಾದಿಗಳ ಹೆಸರಿಗೆ 1 ಎಕರೆ 38 ಗುಂಟೆ ಜಮೀನಿನ ಖಾತೆ ಆಗಿದೆ ಅಂದರೆ ಸರಿ. ಹಾಗೂ ಉಳಿಕೆ 1 ಎಕರೆ 38 ಗುಂಟೆ ಜಮೀನು 3 ನೇ ಪ್ರತಿವಾದಿ ಹೆಸರಲ್ಲಿದೆ ಅಂದರೆ ಸರಿ. ಆ ಪ್ರಕಾರ 1 ಮತ್ತು 2 ನೇ ಪ್ರತಿವಾದಿಗಳು ಹಾಗೂ 3 ನೇ ಪ್ರತಿವಾದಿ ಪ್ರತ್ಯೇಕ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿ. ದಾವಾ 3 ನೇ ಐಟಂ ಸ್ವತ್ತಿನ ಮೇಲೆ 1 ಎಕರೆ 34 ಗುಂಟೆ ಜಮೀನಿನ ಪೈಕಿ 25 ಗುಂಟೆ ಜಮೀನು ಖರಾಬು ಇದೆ ಅಂದರೆ ಸರಿ. ಉಳಿಕೆ 1 ಎಕರೆ 9 ಗುಂಟೆ ಐನು ಜಮೀನು ಇದೆ ಅಂದರೆ ಸರಿ.

ದಾವಾ ಐಟಂ ನಂ 3 ರಲ್ಲಿ 1 ಎಕಟರೆ 9 ಗುಂಟೆ ಜಮೀನಿನ ಪೈಕಿ 24 ವರೆ ಗುಂಟೆ ಜಮೀನು 1 ಮತ್ತು 2 ಪ್ರತಿವಾದಿ ಹೆಸರಲ್ಲಿ ಹಾಗೂ ಉಳಿಕೆ 24 ವರೆ ಗುಂಟೆ ಜಮೀನು 3 ನೇ ಪ್ರತಿವಾದಿ ಹೆಸರಲ್ಲಿದೆ ಅಂದರೆ ಸರಿ. ದಾವಾ ಐಟಂ ನಂ 4 ನ್ನು ದಿಃ29.08.62 ರಂದು 1 ಮತ್ತು 2 ನೇ ಪ್ರತಿವಾದಿ ತಂದೆ ಹಳ್ಳಪ್ಪ ರವರು ಖರೀದಿಸಿದ್ದರು ಅಂದರೆ ಸಾಕ್ಷಿ ನನಗೆ ಗೊತ್ತು ಆದರೆ ಅದು ಸುಳ್ಳಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಕ್ರಯಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನಿಸಿದ್ದೇನೆ.

ದಾವಾ ಐಟಂ ನಂ 4 ರಲ್ಲಿರುವ 2 ಎಕರೆ 7 ಗುಂಟೆ ಜಮೀನನ್ನು ಮಾರಣ್ಣನವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ಮಾರಣ್ಣ ನನ್ನ ತಾತನ ತಮ್ಮ ಆಗಿರುತ್ತಾರೆ. ದಾವಾ ಸ್ವತ್ತುಗಳು ಮೂಲತಃ ನನ್ನ ತಾತ ಮತ್ತು ಅವರ ಮೂರು ಜನ ಅಣ್ಣ ತಮ್ಮಂದಿರಿಗೆ ಸಂಬಂದಪಟ್ಟ ಸ್ವತ್ತುಗಳು ಆಗಿರುತ್ತದೆ ಅಂದರೆ ಸಾಕ್ಷಿ ನನ್ನ ತಾತನಿಗೆ ಸೇರಿದ ಸ್ವತ್ತು ಮಾತ್ರ ಎಂದು ಹೇಳುತ್ತಾರೆ. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತುಗಳು ಸಂಪೂರ್ಣವಾಗಿ ನನ್ನ ತಾತನಿಗೆ ಸೇರಿದ ಸ್ವತ್ತುಗಳು ಎಂದು ನಾನು ಹೇಳಿ ಬರೆಸಿದ್ದೇನೆ.

ದಿಃ29.08.62 ರ ಕ್ರಯಪತ್ರದಲ್ಲಿ ದಾವಾ ಐಟಂ ನಂ 5 ರ ಪೈಕಿ 1 ಎಕರೆ 5 ಗುಂಟೆ ಜಮೀನನ್ನು ಅವರು ಖರೀದಿಸಿದ್ದರು ಅಂದರೆ ಸರಿಯಲ್ಲ. ದಾವಾ ಐಟಂ ನಂ 5 ರ ಜಂಟಿ ಖಾತೆ ಪಹಣಿ 1 ಮತ್ತು 2 ಪ್ರತಿವಾದಿ ತಂದೆ ಹಳ್ಳಪ್ಪರವರ ಹೆಸರಲ್ಲಿದೆ ಅಂದರೆ ಸರಿಯಲ್ಲ. ಸದರಿ ಆಸ್ತಿಗಳ ಖಾತೆ ಪಹಣಿ ನನ್ನ ತಾತ ಹನುಮನರಸಯ್ಯ ರವರ ಹೆಸರಲ್ಲಿದ್ದು ಸದರಿ ಖಾತೆ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

ಪ್ರತಿವಾದಿಗಳು ದಿಃ29.08.62 ರ ಕ್ರಯಪತ್ರದ ಬಗ್ಗೆ ಅವರ ಲಿಖಿತ ತಕರಾರಿನಲ್ಲಿ ನಮೂದಿಸಿದ್ದರೂ ಸಹ ನಾನು ಸದರಿ ಕ್ರಯಪತ್ರವನ್ನು ಪಡೆದು ಅದನ್ನು ಓದಿಲ್ಲ. ತಕರಾರಿನಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. 62 ರ ಕ್ರಯಪತ್ರದ ಬಗ್ಗೆ ನನಗೆ ಎರಡು ವರ್ಷಗಳ ಹಿಂದೆ ಗೊತ್ತಾಯಿತು, ಆದರೆ ಸದರಿ ಕ್ರಯಪತ್ರವನ್ನು ಪಡೆದು ಓದಿಲ್ಲ. ದಾವಾ ಐಟಂ ನಂ 5 ರಲ್ಲಿರುವ ಉಳಿಕೆ 7 ಗುಂಟೆ ಜಮೀನು 3 ನೇ ಪ್ರತಿವಾದಿ ಹೆಸರಲ್ಲಿ ಹಾಗೂ 2 ಗುಂಟೆ ಜಮೀನು ಗಂಗಮ್ಮ ರವರ ಹೆಸರಲ್ಲಿ ಖಾತೆ ಪಹಣಿ ಇದೆ ಅಂದರೆ ಸರಿ.

ದಾವ ಐಟಂ ನಂ 6 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ ಪೈಕಿ 16 ಗುಂಟೆ ಜಮೀನು ಖರಾಬು ಇದ್ದು ಐನು 3 ಎಕರೆ 24 ಗುಂಟೆ ಇದೆ ಅಂದರೆ ಸರಿ. ದಾವಾ ಐಟಂ ನಂ 6 ರಲ್ಲಿರುವ 35 ಗುಂಟೇ ಜಮೀನನ್ನು 1 ಮತ್ತು 2 ಪ್ರತಿವಾದಿಗಳ ತಂದೆ ಹಳ್ಳಪ್ಪ ರವರು ದಿಃ29.08.62 ರ ಕ್ರಯಪತ್ರದಡಿಯಲ್ಲಿ ಖರೀದಿಸಿದ್ದರು ಅಂದರೆ ನನಗೆ ಗೊತ್ತಿಲ್ಲ, ಹಾಗೂ ವಿಬಾಗದಲ್ಲಿ ಹಳ್ಳಪ್ಪರವರಿಗೆ 1 ಎಕರೆ 21 ಗುಂಟೆ ಜಮೀನು ಬಂದಿದೆ ಅಂದರೆ ಸರಿಯಲ್ಲ. ಆ ರೀತಿ ಹಳ್ಳಪ್ಪ ರವರು ಸ ನಂ 43/2 ರಲ್ಲಿ ಒಟ್ಟು 2 ಎಕರೆ 2 ಗುಂಟೆ ಜಮೀನಿನ ಸ್ವಾಧೀನವನ್ನು ಹೊಂದು ಅನುಬವಿಸಿಕೊಂಡು ಬರುತ್ತಿದ್ದರು ಅವರು ತೀರಿಕೊಂಡ ನಂತರ ಅವರ ಮಕ್ಕಳು ಅನುಬವಿಸಿಕೊಂಡು ಬರುತ್ತಿದ್ದಾರೆ ಅಂದರೆ ಸರಿಯಲ್ಲ. ದಾವಾ

ಐಟಂ ನಂ 6ರಲ್ಲಿರುವ ಉಳಿಕೆ 1 ಎಕರೆ 8 ಗುಂಟೆ ಜಮೀನು 3ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಅಂದರೆ ಸರಿಯಲ್ಲ.

ದಾವಾ ಐಟಂ ನಂ 6ರ ಖಾತೆ ಪಹಣಿ ನಮ್ಮ ತಾತನ ಹೆಸರಿನಲ್ಲಿ ಉಳಿಸಿಕೊಂಡಿದ್ದ ಕಾರಣ ಅದನ್ನು ದುರುಪಯೋಗಪಡಿಸಿ ಸದರಿ ಸ್ವತ್ತನ್ನು ಸೇರಿಸಿ ಈ ದಾವೆಯಲ್ಲಿ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ದಾವಾ ಐಟಂ ನಂ 7ರಲ್ಲಿರುವ 2 ಎಕರೆ 30 ಗುಂಟೆ ಜಮೀನಿನ ಪೈಕಿ 4 ಗುಂಟೆ ಖರಾಬು ಹಾಗೂ 2 ಎಕರೆ 24 ಗುಂಟೆ ಐನು ಇದೆ ಅಂದರೆ ಸರಿ. ಸದರಿ ಆಸ್ತಿಯ ಪೈಕಿ 1 ಎಕರೆ 13 ಗುಂಟೆ ಹಳ್ಳಪ್ಪರವರ ಬಾಗಕ್ಕೆ ಬಂದು ಅವರು ಅನುಬವಿಸಿಕೊಂಡು ಬಂದು ಅವರು ತೀರಿಕೊಂಡ ನಂತರ ಅವರ ಮಕ್ಕಳು ಅನುಭವಿಸಿಕೊಂಡು ಬರುತ್ತಿದ್ದಾರೆ ಅಂದರೆ ಸರಿಯಲ್ಲ. ಉಳಿಕೆ 1 ಎಕರೆ 13 ಗುಂಟೆ ಜಮೀನು 3ನೇ ಪ್ರತಿವಾದಿಯ ಬಾಗಕ್ಕೆ ಹೋಗಿದೆ ಅಂದರೆ ಸರಿಯಲ್ಲ.

ನನ್ನ ತಾತ 64 ಇಸವಿಯಲ್ಲಿ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟ ನಂತರ ಅವರು ಸ್ವಾಧಿದಲ್ಲಿ ಇರಲಿಲ್ಲ ಹಾಗೂ ಅವರು ತೀರಿಕೊಂಡ ನಂತರ ನನ್ನ ತಂದೆ ಆಗ ಎರಡು ವರ್ಷದ ಮಗು ಆಗಿದ್ದು ಅವರು ಮತ್ತು ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಹಾಗೂ ನಾವು ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿ ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯಾಂತ ಗೊತ್ತಾಗುತ್ತದೆ ಎಂದು ಹೇಳಿ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 64 ಇಸವಿಯಲ್ಲಿ ನನ್ನ ತಾತ 1000 ರೂ ಪಡೆದುಕೊಂಡು ಚರ ಸ್ಥಿರ ಆಸ್ತಿಗಳ ಪೈಕಿ ನನ್ನ 4ನೇ 1 ಬಾಗದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳಿ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದರೂ ಸಹ ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ದಾವಾ 1 ರಿಂದ 3ನೇ ಆಸ್ತಿಗಳು 50 ಲಕ್ಷ ಬೆಲೆ ಬಾಳುವ ಕಾರಣ ನ್ಯಾಯಾಲಯದ ಶುಲ್ಕವನ್ನು ಕಟ್ಟಲು ನಾನು ತಯಾರಾಗಿದ್ದೇನೆ. ನನ್ನ ತಾತ ಮುತ್ತಾತನವರ ಬಗ್ಗೆ ಮಾಹಿತಿ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸುಳ್ಳು ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.
ಮರುವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**